ದಿನಾಂಕಃ **28-07-2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿಕೆವಿ ವಕೀಲರಿಂದಃ

ನಿಪಿ 1 ರ ವಿಭಾಗ ಪತ್ರದಲ್ಲಿ ಯಾವ ದಾಖಲಾತಿಯ ಆಧಾರದ ಮೇಲೆ ಎ ಸ್ವತ್ತಿನ ಚೆಕ್ಕುಬಂದಿ ಬರೆದಿದ್ದಾರೆ ಗೊತ್ತಿಲ್ಲ. ದಾವಾ ಎ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಸ.ನಂ.10 ಮತ್ತು ಮನೆ ಬರುತ್ತದೆ. ನಿಪಿ 1 ರಲ್ಲಿ ದಾವಾ ಎ ಸ್ವತ್ತಿನ ಪಶ್ಚಿಮದಲ್ಲಿ ವಾಸದ ಮನೆ ಎಂದು ನಮೂದಿದೆ ಆದರೆ ನಮ್ಮ ವಾಸದ ಮನೆ ಅಥವಾ ನಮ್ಮ ಜಮೀನು ಎಂದು ಇಲ್ಲ ಎಂದರೆ ಸಾಕ್ಷಿ ಆ ವಾಸದ ಮನೆ ನಮ್ಮದೇ ಎಂದು ನುಡಿದಿರುತ್ತಾರೆ. ದಾವಾ ಎ ಸ್ವತ್ತಿನ ದಕ್ಷಿಣ ದಿಕ್ಕಿಗೆ ಸ.ನಂ.6 ಸರ್ಕಾರಿ ಜಮೀನು ಬರುತ್ತದೆ. ನಿಪಿ1 ರಲ್ಲಿ ದಾವಾ ಎ ಸ್ವತ್ತಿನ ದಕ್ಷಿಣ ದಿಕ್ಕಿಗೆ ಅಣ್ಣಪ್ಪ ಗೌಡರ ತರಿ ಜಮೀನು ಎಂದು ಇದೆ ಎಂದರೆ ಸರಿ . ವಾದ ಪತ್ರದಲ್ಲಿ ಹೇಳಿರುವ ಚೆಕ್ಕುಬಂದಿ ಸರಿ ಇದೆ. ನಿಪಿ 1 ರ ಚೆಕ್ಕುಬಂದಿ ತಪ್ಪು ಎಂದು ಹೇಳುವುದಿಲ್ಲ, ಆದರೆ ಅವರು ಬರೆದಿದ್ದಾರೆ. ನಿಪಿ1 ರಲ್ಲಿರುವ ಚೆಕ್ಕುಬಂದಿಗೂ ಹಾಗೂ ದಾವಾ ಸ್ವತ್ತಿನ ಚೆಕ್ಕುಬಂದಿಗೂ ಒಂದಕ್ಕೊಂದು ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ.

2006-07 ರಲ್ಲಿ 20 ಗುಂಟೆ ಜಮೀನು ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದು ಗೊತ್ತಾಯಿತು. ಇದಕ್ಕೆ ಸಂಬಂಧಪಟ್ಟಂತೆ ಇದನ್ನು ಬಿಡಿಸಿಕೊಡಬೇಕು ಎಂದು ತಹಶೀಲ್ದಾರರಿಗೆ ಅರ್ಜಿ ಕೊಟ್ಟಿದ್ದೇವೆ , ಲೋಕ್ ಅದಾಲತ್ ನಲ್ಲಿ ಕೂಡ ಅರ್ಜಿ ಕೊಟ್ಟಿದ್ದೇನೆ. ನನ್ನ ಅರ್ಜಿಯ ಮೇರೆಗೆ ತಹಶೀಲ್ದಾರರು ಬಂದು ಪರಿಶೀಲನೆ ಮಾಡಿ ಯಾವುದೇ ಆದೇಶ ಮಾಡಿಲ್ಲ . 2006 ರ ನಂತರ ಸದರಿ ಸ್ವತ್ತನ್ನು ಪ್ರತಿವಾದಿಯಿಂದ ಬಿಡಿಸಿಕೊಡಬೇಕು ಎಂದು ನಾನು ದಾವೆಯನ್ನು ದಾಖಲಿಸಿಲ್ಲ, ನನಗಿಂತ ಮುಂಚೆ ಪ್ರತಿವಾದಿಗಳೇ ದಾವೆಯನ್ನು ದಾಖಲಿಸಿದ್ದಾರೆ. 10/3 ಎಂಬುದು ವಿಭಾಗ ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. 20 ಗುಂಟೆ ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ ಸರ್ವೇಯರ್ ನಕಾಶೆ ಮತ್ತು ವರದಿಯನ್ನು ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ತೋರಿಸಿದ 20 ಗುಂಟೆ ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದು ತೋರಿಸಲು ಕಂದಾಯ ಇಲಾಖೆಯ ಪೂರಕವಾದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ವಕೀಲರ ಕೈಗೆ ಕೊಟ್ಟಿರುತ್ತೇನೆ

ಎಂದು ನುಡಿದಿರುತ್ತಾರೆ. ನಾನು ತೋರಿಸಿದ ದಾವಾ ಎ ಸ್ವತ್ತಿನ ಚೆಕ್ಕುಬಂದಿ ಹಾಗೂ ದಾವಾ ಬಿ ಸ್ವತ್ತಿನ ಚೆಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ. ದಾವಾ ಎ ಸ್ವತ್ತಿನಲ್ಲಿ 20 ಗುಂಟೆಯನ್ನು ಪಹಣಿ ಮತ್ತು ಮ್ಯುಟೇಶನ್ ನಲ್ಲಿ ಕಡಿಮೆ ಮಾಡಬೇಕೆಂದು ನಾನು ಈವರೆಗೂ ಅರ್ಜಿ ಕೊಟ್ಟಿಲ್ಲ. ನನಗೂ ಮತ್ತು ಪ್ರತಿವಾದಿಗದಿದಿಗಳಿಗೂಆಗ ದೇಇರುವುದರಿಂ ದ ಅವರ ವಿರುದ್ದ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 9/12 ಅವರ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಅವರ ಪರ ಡಿಕ್ರಿಯನ್ನು ಪಡೆದಿದ್ದಾರೆ ಎಂದರೆ ಸರಿ. ಅವರ ಪರವಾಗಿ ಡಿಕ್ರಿ ಆದ್ದರಿಂದ ನಾನು ವೈಮನಸ್ಸಿನಿಂದ ಅವರ ವಿರುದ್ದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಎ ಸ್ವತ್ತಿನ ಸ್ವಾಧೀನತೆಯನ್ನು ಈವರೆಗೂ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತು 20 ಗುಂಟೆ ಪ್ರತಿವಾದಿಗಳ ಸ್ವಾಧೀನದಲ್ಲಿ ಇಲ್ಲ ಎಂರದೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ